ಓ ಎಸ್ ನಂ. 24/2015

ಪಿ ಡಬ್ಲ್ಯೂ: 1

ದಿನಾಂಕ 28-06-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ 2, 4(ಎ) ಮತ್ತು (ಬಿ) ಪ್ರತಿವಾದಿ ಪರಃ ಶ್ರೀ ಕೆ ಎಲ್ ಡಿ ವಕೀಲರಿಂದಃ</u>

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ಹೇಳಿದ ರೀತಿಯಲ್ಲಿ ವಕೀಲರು ಬರವಣಿಗೆ ಮಾಡಿ ಹಾಕಿರುತ್ತಾರೆ. ನಾನು ಎಲ್ಲಾರ ಪರವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಸಪ್ಪನವರು ನನ್ನ ತಾತನಾಗಬೇಕು. ದಾಸಪ್ಪನವರ ತಾಯಿ ಮತ್ತು ತಂದೆಯ ಹೆಸರು ನನಗೆ ಸರಿಯಾಗಿ ಗೊತ್ತಿಲ್ಲ. ದಾಸಪ್ಪನವರ ಹೆಂಡತಿ ಹೆಸರು ಕರಿಯಮ್ಮ. ದಾಸಪ್ಪನವರು ಮರ ಹೊಂದಿದ ನಿಖರವಾದ ದಿನಾಂಕ ನನಗೆ ಹೇಳಲು ಆಗುವುದಿಲ್ಲ. ದಾಸಪ್ಪನವರ ಹೆಂಡತಿ ಕರಿಯಮ್ಮ ಮರಣ ಹೊಂದಿದ ದಿನಾಂಕವನ್ನು ನನಗೆ ಹೇಳಲು ಬರುವುದಿಲ್ಲ.

ದಾಸಪ್ಪನವರಿಗೆ ಒಬ್ಬರೇ ಮಗ ಕೃಷ್ಣಪ್ಪ. ಸದರಿ ಕೃಷ್ಣಪ್ಪನವರು ಯಾವ ದಿನಾಂಕದಂದು ಮರಣ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ. ಕೃಷ್ಣಪ್ಪನವರಿಗೆ ಹನುಮಮ್ಮ ಮತ್ತು ಲಕ್ಕಮ್ಮ ಎಂಬ ಇಬ್ಬರು ಹೆಂಡತಿಯರು ಇದ್ದರು. ಹನುಮಮ್ಮ ಮತ್ತು ಲಕ್ಕಮ್ಮ ಯಾವ ದಿನಾಂಕದಂದು ಮರಣ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ. ಹನುಮಮ್ಮನವರಿಗೆ ಚಂದ್ರಪ್ಪ ಎಂಬ ಒಬ್ಬನೇ ಮಗ ಇದ್ದರು. ಚಂದ್ರಪ್ಪನವರು ಮರಣ ಹೊಂದಿ ಸುಮಾರು ೮

ವರ್ಷಗಳಾಗಿರಬಹುದು. ಸದರಿ ಚಂದ್ರಪ್ಪ ನಾನು ಈ ದಾವೆಯನ್ನು ಸಲ್ಲಿಸಿದಾಗ ಜೀವಂತ ಇದ್ದರು, ಮರಣ ಹೊಂದಿದ ದಿನಾಂಕ ನನಗೆ ಹೇಳಲು ಬರುವುದಿಲ್ಲ.

ಚಂದ್ರಪ್ಪನವರಿಗೆ ಆರು ಜನ ಮಕ್ಕಳು. ಅವರೆಂದರೆ 1. ಶಾರದ 2. ಲಕ್ಷ್ಮಮ್ಮ 3. ಮಲ್ಲಿಗಮ್ಮ 4. ಭಾರತಿ 5. ತನು 6. ಶ್ರೀನಿವಾಸ. ಇವರುಗಳ ಪೈಕಿ ಲಕ್ಷ್ಮಮ್ಮ ಮರಣ ಹೊಂದಿರುತ್ತಾರೆ. ಲಕ್ಕಮ್ಮನವರಿಗೆ ಆರು ಜನ ಮಕ್ಕಳು. ಅವರೆಂದರೆ 1. ರತ್ನಮ್ಮ 2. ತಿಮ್ಮರಾಯ 3. ಲಲಿತಮ್ಮ 4. ಗೌರಮ್ಮ ಎಂದರೆ ನಾನು 5. ಲಕ್ಷ್ಮಿದೇವಮ್ಮ 6. ನಾಗರಾಜು. ಇವರುಗಳ ಪೈಕಿ ನಾಗರಾಜು ಇವರು ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದಿದ ದಿನಾಂಕ ನನಗೆ ಗೊತ್ತಿಲ್ಲ. ನಾಗರಾಜುರವರಿಗೆ ಲಲಿತ ಮತ್ತು ಭಾಗ್ಯ ಎಂಬ ಇಬ್ಬರು ಹೆಂಡತಿಯರು ಇದ್ದರು. ಲಲಿತಮ್ಮನವರಿಗೆ ಮೂರು ಜನ ಮಕ್ಕಳು. ಅವರೆಂದರೆ 1. ವಿದ್ಯಾಶ್ರೀ 2.ಪವನ್ 3. ದಿವ್ಯ. ಭಾಗ್ಯ ಇವರಿಗೆ ಇಬ್ಬರು ಮಕ್ಕಳು. ಅವರೆಂದರೆ 1. ಸಂಜು 2. ವಿನುತಾ.

ವಿನುತಾರವರ ಮದುವೆಯಾಗಿದ್ದು, ಅವರ ಗಂಡನ ಹೆಸರು ನನಗೆ ಗೊತ್ತಿಲ್ಲ. ವಿದ್ಯಾಶ್ರೀ ಇವರನ್ನು ನನ್ನ ಮಗನಿಗೆ ಕೊಟ್ಟು ಮದುವೆ ಮಾಡಲಾಗಿದೆ. ವಂಶವೃಕ್ಷಕ್ಕೆ ನಾನು ಸರಿಯಾಗಿ ಮಾಹಿತಿ ನೀಡದೆ ತಪ್ಪಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ರತ್ನಮ್ಮನಿಗೆ ಯಾವಾಗ ಮದುವೆಯಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ರತ್ನಮ್ಮನನ್ನು ಸೋಮೇಗೌಡ ಎಂಬುವವರಿಗೆ ಕೊಟ್ಟು ಮದುವೆ ಮಾಡಲಾಗಿದೆ. ಲಲಿತಮ್ಮನ ಗಂಡನ ಹೆಸರು ರಂಗೇಗೌಡ. ಲಲಿತಮ್ಮನನ್ನು ಸ್ವಾಮಿಕಟ್ಟೆಗೆ ಕೊಟ್ಟಿದ್ದು, ಭದ್ರಾವತಿಯಲ್ಲಿ ವಾಸ ಇದ್ದಾರೆ. ಅವರ ಮದುವೆಯ ದಿನಾಂಕ ನನಗೆ

ಹೇಳಲು ಬರುವುದಿಲ್ಲ. ನನ್ನ ಮದುವೆಯ ದಿನಾಂಕ ನನಗೆ ಹೇಳಲು ಬರುವುದಿಲ್ಲ.

ನನ್ನ ತಂದೆ ಬದುಕಿದ್ದಾಗ ಕೆಲವು ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರಿಯರು ಸೇರಿ ನನ್ನ ತಂದೆಯ ಹೆಸರಿನಲ್ಲಿ ಮಾರಾಟ ಮಾಡಿ ಮದುವೆಯ ಖರ್ಚಿಗೆ ಹಣವನ್ನು ಬಳಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಮಾರಾಟ ಮಾಡಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಲಲಿತಮ್ಮ ಮತ್ತು ರತ್ನಮ್ಮನಿಗೆ ಮದುವೆ ಸಮಯದಲ್ಲಿ ತಲಾ 100 ಗ್ರಾಂ ಒಡವೆಗಳನ್ನು ಕೊಟ್ಟು ಖರ್ಚು ಮಾಡಿ ಮದುವೆ ಮಾಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮದುವೆಯ ಸಮಯದಲ್ಲಿ ಯಾವುದೇ ಆಸ್ತಿಗಳನ್ನು ಮಾರಾಟ ಮಾಡಿಲ್ಲ ಎಂದು ನುಡಿದಿರುತ್ತಾರೆ. ಆದ ಕಾರಣ ನಾನು ನನ್ನ ತಂದೆ ತಾಯಿ ಬದುಕಿದ್ದಾಗ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆಸ್ತಿಗಳನ್ನು ಕೊಡುತ್ತೇನೆಂದು ಹೇಳುತ್ತಿದ್ದರು, ನಂತರ ಹೃದಯಾಘಾತದಿಂದ ಮರಣ ಹೊಂದಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ದುರುದ್ದೇಶದಿಂದ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಎಷ್ಟು ಐಟಂ ಎಂಬ ಪ್ರಶ್ನೆಗೆ ಸಾಕ್ಷಿಯು ಒಟ್ಟು 35-40 ಎಕರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ 1 ರಿಂದ 12 ನೇ ಐಟಂನ ಚಕ್ಕುಬಂದಿ ಮತ್ತು ಸರ್ವೆ ನಂಬರು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು 8 ವರ್ಷಗಳಾಗಿವೆ ನನಗೆ ಈಗ ನೆನಪಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳಲ್ಲಿ ಯಾವ ಬೆಳೆಯನ್ನು ಬೆಳೆಯುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅಡಿಕೆ ಮತ್ತು ತೆಂಗು ಇದೆ ಎಂದು

ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ನಿಖರವಾಗಿ ಯಾವ ಸರ್ವೆ ನಂಬರಿನಲ್ಲಿ ಯಾವ ಬೆಳೆ ಬೆಳೆಯುತ್ತಾರೆಂದು ನನಗೆ ಹೇಳಲಾಗುವುದಿಲ್ಲ ಎಂದು ನುಡಿದಿರುತ್ತಾರೆ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.11 ಮತ್ತು 12 ರ ಆಸ್ತಿಗಳಿಗೂ ನನಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂದಪಟ್ಟ ಮೂಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು 1983 ರಲ್ಲಿ ಕೃಷ್ಣಪ್ಪನ ಮಕ್ಕಳು ವಿಭಾಗ ಮಾಡಿಕೊಂಡು 1992-93 ರಲ್ಲಿ ಪಾಲುಪಟ್ಟಿ ಮಾಡಿಕೊಂಡು ಬ್ಯಾಂಕಿನಲ್ಲಿ ಆಧಾರ ಮಾಡಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಿಪಿ-9 ರಂತೆ ದಾವಾ ಆಸ್ತಿಗಳಲ್ಲಿ ವಿಭಾಗ ಆಗಿದೆಯೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ವಿಭಾಗ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ನನ್ನ ತಂದೆ ಆಸ್ತಿಯಲ್ಲಿ ವಿಭಾಗ ಕೋರಿ ದಾವೆ ಸಲ್ಲಿಸಿದ್ದೇನೆ ಎಂದು ನುಡಿದಿರುತ್ತಾರೆ. ನನಗೆ ದಾವೆ ಮತ್ತು ದಾಖಲೆಗಳ ಬಗ್ಗೆ ಏನು ಗೊತ್ತಿಲ್ಲ ಎಂದರೆ ಸರಿಯಲ್ಲ.

ಮದುವೆಯ ಖರ್ಚಿನ ಸಾಲ ಮರುಪಾವತಿ ಮಾಡಲು ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಮದುವೆಯ ಸಾಲವನ್ನು ತೀರುವಳಿ ಮಾಡಲಾಗದೆ ನನ್ನ ತಂದೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 23/08/2006 ರಂದು ನಿಪಿ-1 ರಂತೆ ಪಾಲುಪಟ್ಟಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಉಳಿದ ಸಾಲವನ್ನು ಮಾರಾಟ ಮಾಡುವ ಸಲುವಾಗಿ ನಿಪಿ-2 ರಂತೆ ಆಸ್ತಿಯನ್ನು ಮಾರಾಟ

ಮಾಡಲಾಗಿದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನಾನು ನನ್ನ ತಂದೆ ಮರಣ ಹೊಂದಿದ ನಂತರ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕೆಲವು ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರಿ ಸೇರಿ ಮಾರಾಟ ಮಾಡಿರುವುದರಿಂದ ದಾವೆಯನ್ನು ಈಗ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ 4(ಎ) ಮತ್ತು (ಬಿ)ರವರು ದಾವಾ ಆಸ್ತಿಗಳಲ್ಲಿ ಬಂದಿರುವ ಭಾಗಗಳನ್ನು ಮಾರಾಟ ಮಾಡಿಲ್ಲ ಎಂದರೆ ನಿಜ.

ನಿಪಿ-16 ರ ದಾಖಲೆಯ ಪ್ರಕಾರ ಪಾಲುಪಟ್ಟಿಯಂತೆ ಖಾತೆ ಬದಲಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಕಾನೂನುಬದ್ದವಾಗಿ ಖಾತೆ ಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ನಿಪಿ-17 ರ ದಾಖಲೆಯ ಪ್ರಕಾರ ಪ್ರತಿವಾದಿ 1, 4(ಎ) ಮತ್ತು (ಬಿ) ರವರ ಹೆಸರಿಗೆ ಖಾತೆ ಇದ್ದು, ಅವರ ಅನುಭವದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದು ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.